ಮಹಾರಾಣಿ ಪೊನ್ನಲಾದೇವಿ ಪಲ್ಲಕ್ಕಿಯನ್ನು ಕಂಡೊಡನೆ ಹೊರಗೆ ಓಡಿಬಂದಳು. ಮಗಳನ್ನು ತಬ್ಬಿಕೊಂಡು ಒಳಗೆ ಕರೆದೊಯ್ದಳು.

''ಹೊಸ ಊರು! ಕತ್ತಲು ಬೇರೆ ಆಗುತ್ತ ಬಂತು! ಎಲ್ಲಿ ತಿರುಗಾಡಲಿಕ್ಕೆ ಹೋದೆ? ನಿನಗೆ ಭಯ ಭೀತಿ ಏನೂ ಇಲ್ಲವೇ?'' ಅಮ್ಮನಿಗೆ ಒಂದು ಕಡೆ ನೆಮ್ಮದಿ! ಒಂದು ಕಡೆ ಕೋಪ!

''ಭಯವೇ ? ಶ್ರೀಮನ್ ಮಹಾರಾಜಾದಿರಾಜ ಪರಮೇಶ್ವರ ಶ್ರೀ ಅಭಿನವ ದೇವರಾಯ!

ಬಾರಿಬಾರಿಗೂ ಬಹಮನಿಯರನ್ನು ಮಣ್ಣು ಮುಕ್ಕಿಸಿದ ಶ್ರೀ ಪ್ರತಾಪದೇವರಾಯ!

ಗಜಪತಿರಾಜ್ಯದವರನ್ನು ಗಜ ಪಡೆಯೊಂದಿಗೆ ನಿರ್ನಾಮ ಮಾಡಿದ ಗಜಬೇಟೆಗಾರ!

ಮಹೋನ್ನತವಾದ ವಿಜಯನಗರ ಸಾಮ್ರಾಜ್ಯಾಧಿಪತಿಯಾದ ಇಮ್ಮಡಿ ದೇವರಾಯ! ಅಂತಹ ಪರಾಕ್ರಮಶಾಲಿಯಾದ ಮಹರಾಯರ ಮಗಳಾದ ನನಗೆ ಭಯವೇ?''

ವೀರಾವೇಶಗೊಂಡವಳಂತೆ ಮೊಳಗಿದ ವಿರೂಪಾಕ್ಷಿ ತನ್ನ ಒಡ್ಯಾಣದಲ್ಲಿ ಸಿಕ್ಕಿಸಿದ್ದ ಸಣ್ಣ ಬಾಕುವನ್ನು ಹೊರತೆಗೆದಳು.

''ಭಲೇ! ಭೇಷ್! ತಂದೆಗೆ ತಕ್ಕ ಮಗಳೆಂದರೆ ಹೀಗೆ ಇರಬೇಕು!''

ಕರತಾಡನ ಮಾಡಿ ಒಳಗೆ ಪ್ರವೇಶಿಸಿದರು ಇಮ್ಮಡಿ ದೇವರಾಯರು.

ತಂದೆಯನ್ನು ಕಂಡೊಡನೆ ವಿರೂಪಾಕ್ಷಿಯ ಮನದಲ್ಲಿ ಹರ್ಷ ಉಕ್ಕಿತು. ಅವರೊಡನೆ ಮಾತನಾಡುವುದಿಲ್ಲವೆಂಬ ನಿರ್ಧಾರವೆಲ್ಲ ಪುಡಿ ಪುಡಿಯಾಯಿತು.

''ಅಪ್ಪಾಜಿ!'' ಎಂದು ಕೂಗುತ್ತ ಓಡಿ ಹೋಗಿ ಅವರ ಸೊಂಟ ಬಳಸಿ ಹಿಡಿದುಕೊಂಡಳು.

''ನನ್ನ ಮುದ್ದು ಮಗಳಿಗೆ ಇವತ್ತು ಏನಾದರೊಂದು ಉಡುಗೊರೆ ಕೊಡಬೇಕಲ್ಲ...'' ಬಾಗಿ ಮುದ್ದು ಮಗಳ ಹಣೆಗೊಂದು ಮುತ್ತನ್ನಿಟ್ಟು ನುಡಿದರು ಮಹಾರಾಜರು.

''ಇವಳಿಗೆಂತಹ ಉಡುಗೊರೆ? ಭಯವಿಲ್ಲದೆ ಬೀದಿ ತಿರುಗಿಕೊಂಡು ಬಂದಿರುವಳು'' ಅಮ್ಮ ಹುಸಿಗೋಪ ತೋರಿದಳು.

''ತಾನು ವಿಜಯನಗರದ ವೀರಪುತ್ರಿ ಎಂಬುದನ್ನು ಸಾಬೀತು ಮಾಡಿರುವಳಲ್ಲ! ಅದಕ್ಕೆ ಕೊಡಬೇಡವೇ ಒಂದು ವಿಶಿಷ್ಟ ಉಡುಗೊರೆಯನ್ನ?''

''ಅಪ್ಪಾಜಿ, ನನಗೆ ಬೇಕಾದ ಉಡುಗೊರೆಯನ್ನ ಬೇಕಾದಾಗ ಕೇಳಿ ಪಡೆದುಕೊಳ್ಳುವೆ. ಸದ್ಯ ನೀವು ಮತ್ತೆ ಎಲ್ಲಿಗೂ ಹೋಗದೆ ನಮ್ಮ ಜೊತೆಯಲ್ಲಿದ್ದರೆ ಸಾಕು'' ಗಡುಸಾಗಿ ನುಡಿದಳು ವಿರೂಪಾಕ್ಷಿ.

''ಅಪ್ಪಣೆ ಪುಟ್ಟ ರಾಣಿ!'' ಎಂದು ಅಟ್ಟಹಾಸದಿಂದ ನಕ್ಕರು ಇಮ್ಮಡಿ ದೇವರಾಯರು.

ಮಾತು ಕೊಟ್ಟಂತೆ ಸದಾ ಕಾಲವೂ ಕುಟುಂಬದೊಂದಿಗಿದ್ದು ಉಲ್ಲಾಸದಿಂದ ಕಾಲ ಕಳೆದರು ಮಹಾರಾಜರು. ವಿರೂಪಾಕ್ಷಿಯೊಂದಿಗೆ ಚದುರಂಗವಾಡಿದರು. ಅವಳಿಗೆ ಕತ್ತಿವರಸೆ ಕಲಿಸಿದರು. ತನ್ನ ಮುಂದೆ ಕೂರಿಸಿಕೊಂಡು ಕುದುರೆ ಸವಾರಿ ಮಾಡಿಸಿದರು. ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತ ಗುಡ್ಡ ಬೆಟ್ಟಗಳ ಕಡೆ ಅವಳೊಂದಿಗೆ ಚಾರಣ ಮಾಡಿ ಬಂದರು.

ಅಂದು ಸಮೀಪದಲ್ಲಿದ್ದ ಕೆರೆಯ ತೀರದಲ್ಲಿ ವನಭೋಜನ. ನೃತ್ಯ, ಗಾಯನ, ಹೂಚೆಂಡಿನ ಆಟ, ಕೋಲಾಟ, ಗಿರಿಗಿಟ್ಲೆ ಆಟ ಎಲ್ಲ ಮುಗಿದು ಸಖಿತ್ತಾದ ಭೋಜನವೂ ಆಯಿತು. ಆಟಪಾಟಗಳಿಂದಲೂ ಬಿಸಿಲಿನಿಂದಲೂ ದಣಿದಿದ್ದ ರಾಣಿ ಪೊನ್ನಲಾದೇವಿ ಗುಡಾರಕ್ಕೆ ಹಿಂದಿರುಗಲು ಸಿದ್ಧವಾದಳು.

''ನೀನು ಪರಿವಾರದೊಂದಿಗೆ ಹೊರಡು ದೇವಿ. ಈ ಸುಂದರ ಪರಿಸರ ನನ್ನ ಕಲ್ಪನೆಯನ್ನು ಕೆರಳಿಸಿದೆ. ಏಕಾಂತವಾಗಿ ಸ್ವಲ್ಪ ಹೊತ್ತು ಇಲ್ಲೇ ಕುಳಿತು ನನ್ನ 'ಸೊಬಗಿನ ಸೋನೆ' ಕೃತಿಯನ್ನು ಪೂರೈಸಿ ಬರುತ್ತೇನೆ. ರಾಜಧಾನಿಗೆ ಹಿಂದಿರುಗಿಬಿಟ್ಟರೆ ಇದಕ್ಕೆಲ್ಲ ಸಮಯ ಸಿಕ್ಕುವುದಿಲ್ಲ.'' ಎಂದರು ಮಹಾರಾಜರು.

''ನಾನೂ ಇಲ್ಲೇ ಇರುತ್ತೇನೆ ಅಪ್ಪಾಜಿ!'' ಆವರಿಸಿದ್ದ ದಟ್ಟ ಮರಗಳನ್ನು ಪ್ರತಿಬಿಂಬಿಸುತ್ತಿದ್ದ